**ದಿನಾಂಕ:16.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

3. ಕಲ್ಲನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಲಗೇ ಮು,ಮಾ–1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ ಜಿ.ಎನ್.ಜಿ ವಕೀಲರಿಂದಃ**

4. ಈ ದಿನ ನ್ಯಾಯಾಲಯಕ್ಕೆ ನಾನು ಮತ್ತು ಚಾಸಾ–1 ನಮ್ಮೂರಿನಿಂದ ಒಟ್ಟಿಗೆ ಬಂದಿರುತ್ತೇವೆ ಎಂದರೆ ನಿಜ. ನನ್ನ ಮತ್ತು ಚಾಸಾ–1 ರವರ ಮನೆಗಳು ನಮ್ಮೂರಿನಲ್ಲಿ ಒಂದೇ ಕಡೆ ಇರುತ್ತವೆ ಎಂದರೆ ಸರಿಯಲ್ಲ. ಆದರೆ ನಮ್ಮ ಮನೆಗೂ ಚಾಸಾ–1 ರವರ ಮನೆಗೂ 50–60 ಅಡಿ ಅಂತರ ಇರುತ್ತದೆ. ನಾನು ಮತ್ತು ಚಾಸಾ–1 ಒಂದೇ ಜಾತಿಗೆ ಸೇರಿರುತ್ತೇವೆಂದರೆ ನಿಜ. ನನ್ನ ಹೆಂಡತಿ ಆಶಾ ಕಾರ್ಯಕರ್ತೆ ಎಂದರೆ ನಿಜ. ನಾನು ರಾಜಕೀಯ ಪಕ್ಷದ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ನಿಜ.

5. ಪಂಚನಾಮೆಗೆ ಬನ್ನಿ ಎಂದು ಪೊಲೀಸರು ನನಗೆ ನೋಟೀಸು ಕೊಟ್ಟಿದ್ದರು. ಘಟನೆಯಾದ 2 ದಿನದ ಬಳಿಕ ಆ ರೀತಿ ಪೊಲೀಸ್ ನೋಟೀಸನ್ನು ಆಂಜನೇಯ ದೇವಸ್ಥಾನದ ಹತ್ತಿರ ಬೆಳಿಗ್ಗೆ 10–11 ಗಂಟೆಗೆ ಕೊಟ್ಟಿದ್ದರು ನಂತರ ಪಂಚನಾಮೆಯನ್ನು ಬೆಳಿಗ್ಗೆ 10–11 ಗಂಟೆಗೆ ಮಾಡಿರುತ್ತಾರೆ. ಪಂಚನಾಮೆಗೆ ಮಾಹಿತಿಯನ್ನು ಯಾರು ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪಂಚನಾಮೆಯಲ್ಲಿ ಏನೇನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪೊಲೀಸು ನಿಂತುಕೊಳ್ಳಿ ಎಂದು ಹೇಳಿದ್ದರಿಂದ ನಾನು ನಿಂತುಕೊಂಡು ಪೋಟೋ ತೆಗೆಸಿಕೊಂಡೆ ಎಂದರೆ ನಿಜ.

6. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ ಎಂದರೆ

ಸರಿಯಲ್ಲ, ಆದರೆ ಕಲ್ಲನ್ನು ವಶಪಡಿಸಿಕೊಂಡರು. ಮು,ಮಾ–1 ರಂತಹ ಕಲ್ಲು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಪೊಲೀಸರು ಪಂಚನಾಮೆ ಮಾಡುವ ಕಾಲಕ್ಕೆ ಮು.ಮಾ–1 ರ ಕಲ್ಲನ್ನು ವಶಪಡಿಸಿಕೊಂಡರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮು,ಮಾ–1 ರ ಮೇಲೆ ನನಗೆ ಯಾವುದೇ ವಿಶೇಷವಾದ ಗುರುತು ಇಲ್ಲ ಎಂದರೆ ನಿಜ.

7. ಚಾಸಾ–1 ರವರಿಗೆ ಸಹಾಯಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ–1 ರವರಿಗೆ ಪ್ರಚೋದನೆ ನೀಡಿ ಸುಳ್ಳು ದೂರು ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ರವರು ಆರೋಪಿತರಿಗೆ ಬೈದು, ಹಲ್ಲೆ ಮಾಡಿ, ಬೆದರಿಕೆ ಹಾಕಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ದೂರು ದಾಖಲಿಸಲು ಪ್ರಚೋದನೆ ನೀಡಿದ್ದೇನೆ ಎಂದರೆ ಸರಿಯಲ್ಲ.

8. ಪೊಲೀಸರು ನನಗೆ ನೋಟೀಸು ಕೊಟ್ಟಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಹಾಗೂ ಮು,ಮಾ–1 ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ, ನಾನು ಪಂಚನಾಮೆಗೆ ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.